ಪ್ರಮಾಣೀಕರಿಸಲಾದ ದಿನಾಂಕಃ **28.11.2025.**

<u>ಮುಂದುವರೆದ ಪಾಟೀ ಸವಾಲು ವಾದಿ ಪರ ಶ್ರೀ. ಎನ್ ಪಿ ಎಂ ವಕೀಲರಿಂದಃ</u>

ಎಸ್. ಆರ್. ಜೆ ವಕೀಲರು ನಾನು ಸಲ್ಲಿಸಿರುವ ದಾಖಲೆಗಳನ್ನು ತಯಾರಿಸಿದರು ಎಂದರೆ ಸರಿ. 1996 ರಲ್ಲಿ ಕ್ರಯ ಪತ್ರ ಗುಂಡುರಾವ್ ರವರಿಂದ ಬರೆದುಕೊಟ್ಟಾಗ ಈ ವಕೀಲರು ಪರಿಚಯವಾಗಿರುತ್ತಾರೆ. 2017 ರಲ್ಲಿ ನಮ್ಮ ಕುಟುಂಬದಲ್ಲಿ ಆಸ್ತಿಗಳ ಹಕ್ಕು ಬಿಡುಗಡೆ ಪತ್ರವಾಗಿದೆ ಎಂದರೆ ನೆನಪಿಲ್ಲ. ಈ ಕುಟುಂಬದ ಹಕ್ಕು ಬಿಡುಗಡೆ ಪತ್ರಕ್ಕೆ ನಾನು ಮತ್ತು ನನ್ನ ಮಗ ಸಾಕ್ಷಿಗಳಾಗಿ ಸಹಿ ಮಾಡಿರುತ್ತೇವೆ ಎಂದರೆ ನೆನಪಿಲ್ಲ. ನಿ. ಡಿ 9 1997 ರ ಜಮಾಬಂದಿ ಎಂದರೆ ಸರಿ. ನಿ ಡಿ 9 ದಾಖಲೆಯ ಕಲಂ ನಂ. 5 ರಲ್ಲಿ ಈ ಜಮೀನನ್ನು ಬಟಮಾನ್ಯ ಎಂದು ನಮೂದಿಸಲಾಗಿದೆ ಎಂದರೆ ಸರಿ. ಈ ಬಟಮಾನ್ಯ ಪರಬಾರೆ ಮಾಡಬಾರದೆಂಬ ಕಾನೂನು ಜಾರಿಯಲ್ಲಿದೆ ಎಂದರೆ ಗೊತ್ತು, ಆದರೆ ಕುಟುಂಬದೊಳಗೆ ಮಾಡಿಕೊಳ್ಳಬಹುದೆಂದು ಕಾನೂನು ಸಲಹೆ ಪಡೆದು ಮಾಡಿಕೊಂಡಿರುತ್ತೇವೆ. ಈ ಕಾನೂನು ಸಲಹೆಯನ್ನು ಎಸ್. ಆರ್. ಜೆ ವಕೀಲರು ತಿಳಿಸಿರುತ್ತಾರೆ. ಈ ಸದರಿ ನಿ ಡಿ 9 ರಲ್ಲಿರುವ ಜಮೀನು ಬಟಮಾನ್ಯ ಅಸ್ತಿ ಆದ ಕಾರಣಕ್ಕೆ ಎಲ ಪರಬಾರೆ ಆಸ್ತಿಗಳು ಶೂನ್ಯ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ ಇರುವುದಿಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚಿಸಿದೆ)

Sd/-
ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ಪೊನ್ನಂಪೇಟೆ